ಸಾಕ್ಷಿಗೆ ಪ್ರತಿಜ್ಞೆ ಮಾಡಿಸಲಾಯಿತು.
ದಿನಾಂಕಃ 24-10-2019

**ಮುಂದುವರೆದ ಪಾಟೀ ಸವಾಲುಃ ಶ್ರೀ ಎ.ಹೆಚ್.ವಿ ರವರಿಂದ 2ನೇ ಪ್ರತಿವಾದಿ ಪರ ಃ**

3. ನಿಪಿ 2 ರಲ್ಲಿರುವ ಎಲ್ಲಾ ಸಂಗತಿಗಳನ್ನು ತಿಳಿದುಕೊಂಡಿರುತ್ತೇನೆ. ನಿಪಿ 2 ನ್ನು ಯಾರು ಮಾಲೀಕರು ಎಂದು ಮಾರಾಟ ಮಾಡಿದ್ದರು ಎಂಬ ಪ್ರಶ್ನೆಗೆ 3ನೇ ಪ್ರತಿವಾದಿ ಮಾಲೀಕರು ಎಂದು ಹೇಳಿ 1ನೇ ಪ್ರತಿವಾದಿ ಮಾರಾಟ ಮಾಡಿರುತ್ತಾರೆ. ನನ್ನ ವಾದಪತ್ರದಲ್ಲಿ 1 ರಿಂದ 3ನೇ ಪ್ರತಿವಾದಿಗಳನ್ನು ಎದುರು ಪಕ್ಷಗಾರರನ್ನಾಗಿ ಮಾಡಿರುತ್ತಾರೆ. ಅವರನ್ನು ನಮ್ಮ ಸ್ವತ್ತಿಗೆ ತೊಂದರೆ ನೀಡಿದ ಕಾರಣ ಪಕ್ಷಗಾರರನ್ನಾಗಿ ಮಾಡಿರುತ್ತೇನೆ. ನೀವು ನ್ಯಾಯಾಲಯಕ್ಕೆ ಹಾಜರುಪಡಿಸಿದ ಯಾವುದಾದರೂ ದಾಖಲೆಗಳಲ್ಲಿ 2ನೇ ಪ್ರತಿವಾದಿ ಸಹಿಯಾಗಲೀ ಹೆಸರಾಗಲೀ ಇದೆಯಾ ಎಂದರೆ ನಿಪಿ 20 ರಲ್ಲಿ ಉಲ್ಲೇಖ ಇದೆ ಎಂದು ಹೇಳುತ್ತಾರೆ.

4. ದಾವಾಸ್ವತ್ತು ನನ್ನ ಹೆಂಡತಿಯ ಹೆಸರಿನಲ್ಲಿ ಇರುತ್ತದೆ. ಅಲಾಟ್‌ಮೆಂಟ್ ಲೆಟರನ್ನು 1996 ರಲ್ಲಿ ನೀಡಲಾಗಿರುತ್ತದೆ. ನಿಪಿ 2 ನ್ನು 2000 ರಲ್ಲಿ ನೊಂದಣಿಯಾಗಿರುತ್ತದೆ. ನನಗೆ ನಿಪಿ 20 ನ್ನು 1ನೇ ಪ್ರತಿವಾದಿ ನೀಡಿರುತ್ತಾರೆ. ನಿಪಿ 1 ರಲ್ಲಿ 2ನೇ ಪ್ರತಿವಾದಿಯ ಸಹಿಯಾಗಲೀ, ಭಾವಚಿತ್ರವಾಗಲಿ ಇರುವುದಿಲ್ಲ, ದಾವಾಸ್ವತ್ತು ಸರ್ವೆ ನಂ. 428 ರಲ್ಲಿ ಬರುತ್ತದೆ. ದಾವಾಸ್ವತ್ತಿಗೂ 2ನೇ ಪ್ರತಿವಾದಿಗೂ ಯಾವುದೇ ಸಂಬಂಧ ಇಲ್ಲದೇ ಇದ್ದರೂ ಸಹ 1ನೇ ಪ್ರತಿವಾದಿಯವರ ಮಾತು ಕೇಳಿ ನ್ಯಾಯಾಲಯದಲ್ಲಿ ಸುಳ್ಳು ದಾವೆ ಹೂಡಿರುತ್ತೇನೆ ಎಂದರೆ ಸುಳ್ಳು.

5. ವಾದಪತ್ರದಲ್ಲಿ ಹೇಳಿರುವ ಲೇಔಟ್ ಅಸ್ತಿತ್ವದಲ್ಲಿ ಇದ್ದ ಬಗ್ಗೆ ಯಾವುದರೂ ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಇಲ್ಲ ಎನ್ನುತ್ತಾರೆ. ದಾವಾಸ್ವತ್ತು ಅಸ್ತಿತ್ವದಲ್ಲಿ ಇಲ್ಲದೇ ಇದ್ದರೂ ಸಹ ದಾವಾಸ್ವತ್ತನ್ನು ಮೋಸ ಮಾಡಿ ಮಾರಾಟ ಮಾಡಿರುತ್ತಾರೆ ಎಂದರೆ ಸುಳ್ಳು. ದಾವಾಸ್ವತ್ತಿಗೆ 1ನೇ ಪ್ರತಿವಾದಿ

ಮಾಲೀಕರಾಗಿಲ್ಲದ ಕಾರಣ ಯಾವುದೇ ಲೇಔಟ್ ಪ್ಲಾನ್ ಹಾಜರುಪಡಿಸಿಲ್ಲ ಎಂದರೆ ಸುಳ್ಳು. ನ್ಯಾಯಾಲಯಕ್ಕೆ ಹಾಜರುಪಡಿಸಿದ ದಾಖಲೆಗಳನ್ನು ಸೃಷ್ಟಿಸಿ ಹಾಜರುಪಡಿಸಿರುತ್ತೇನೆ ಎಂದರೆ ಸುಳ್ಳು.

6. ನಿಪಿ 21 ರಿಂದ 25 ನ್ನು 2011 ರಲ್ಲಿ ನಾನೇ ತೆಗೆದಿರುತ್ತೇನೆ. ಸದರಿ ಭಾವಚಿತ್ರಗಳಲ್ಲಿ ದಾವಾಸ್ವತ್ತನ್ನು ಗುರುತಿಸಲು ಸಾಧ್ಯವಾಗುತ್ತದೆ. ನಿಪಿ 23 ರಲ್ಲಿ ಕಾಣಿಸುವ ಸ್ವತ್ತಿನಲ್ಲಿ ದಾವಾಸ್ವತ್ತು ಇದೆ. ಆದರೆ ಅಲ್ಲಿ ಯಾವುದೇ ನಂಬರು ಕಾಣದ ಕಾರಣ ಗುರುತಿಸಲಾಗುವುದಿಲ್ಲ. ದಾವಾಸ್ವತ್ತನ್ನು 2011-12ನೇ ಸಾಲಿನಲ್ಲಿ ಸುಮಾರು 5-6 ವರ್ಷಗಳವರೆಗೆ ಗುರುತಿಸಲಾಗಿರುವುದಿಲ್ಲ. ದಾವಾಸ್ವತ್ತಿನ ಸ್ವಾಧೀನತೆಯಲ್ಲಿ ಇದಿದ್ದರೆ ಭಾವಚಿತ್ರ ತೆಗೆಸಿ ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇತ್ತಾ ಎಂದರೆ ಸಾಕ್ಷಿಯು ಸದರಿ ಸಮಯದಲ್ಲಿ ದಾವಾಸ್ವತ್ತಿನ ಒಳಗೆ ಬಿಡುತ್ತಿರಲಿಲ್ಲ.

7. ನನ್ನ ವಾದಪತ್ರದಲ್ಲಿ ಹೇಳಿರುವ ಗಲಾಟೆ ಬಗ್ಗೆ ನನ್ನ ಸ್ನೇಹಿತರು ಮತ್ತು ಅಕ್ಕಪಕ್ಕದ ಸೈಟಿನ ಮಾಲೀಕರು ಮಾಹಿತಿ ನೀಡಿರುತ್ತಾರೆ. ನಂತರ ನಾನು ಠಾಣೆಗೆ ಹೋಗಿ ದೂರು ನೀಡಲು ಹೋದಾಗ ಪೋಲೀಸರು ಇದು ಸಿವಿಲ್ ಸ್ವರೂಪವಾದ ಕಾರಣ ನ್ಯಾಯಾಲಯಕ್ಕೆ ಹೋಗಿ ಎಂದು ಹೇಳಿರುತ್ತಾರೆ. ನಾನು ಹೇಳಿದಂತಹ ಯಾವುದೇ ಗಲಾಟೆ ನಡೆಯದೇ ಇದ್ದರೂ ಸಹ 1ನೇ ಪ್ರತಿವಾದಿಯವರ ಮಾತು ಕೇಳಿ ಸುಳ್ಳು ದಾವೆ ಹೂಡಿರುತ್ತೇನೆ ಎಂದರೆ ಸುಳ್ಳು.

(1 ಮತ್ತು 3ನೇ ಪ್ರತಿವಾದಿ ಹಾಗೂ ಅವರ ಪರ ವಕೀಲರನ್ನು ಕೂಗಿ ಕರೆಯಲಾಯಿತು. ಗೈರು ಹಾಜರಿ. ಆದ್ದರಿಂದ ಅವರ ಪರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು)

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).
ಓ.ಹೇ.ಕೇ.ಸ.ಎ. ಒಪ್ಪಲಾಗಿದೆ.

ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ದೇವನಹಳ್ಳಿ.